# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 880 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 21.09.2022 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಕಂದಾಯ ಇಲಾಖೆಯ ಕಛೇರಿಗಳಿಗೆ ಕಛೇರಿ ನಿರ್ವಹಣೆ ಸಾದಿಲ್ವಾರು ಅನುದಾನ ನೀಡಲಾಗುತ್ತಿದೆಯೇ; ನೀಡುತ್ತಿದ್ದಲ್ಲಿ ಯಾವ ಯಾವ ಬಾಬ್ತುಗಳಿಗೆ ನೀಡಲಾಗುತ್ತಿದೆ; (ವಿವರ ನೀಡುವುದು) | ಹೌದು.<br>ಕಂದಾಯ ಇಲಾಖೆಯಿಂದ ಕಂದಾಯ ಇಲಾಖೆಯ ಕಛೇರಿಗಳಿಗೆ ವೈದ್ಯಕೀಯ ವೆಚ್ಚ ಮರುಪಾವತಿ, ಪ್ರಯಾಣ ವೆಚ್ಚ ಸಾಮಾನ್ಯ ವೆಚ್ಚ, ದೂರವಾಣಿ ವೆಚ್ಚ ಇತರೆ ವೆಚ್ಚ, ಕಟ್ಟಡ ವೆಚ್ಚ, ಪೀಠೋಪಕರಣ ಖರೀದಿ ವೆಚ್ಚ, ಸಾರಿಗೆ ವೆಚ್ಚ, ನಿರ್ವಹಣಾ ವೆಚ್ಚ, ಗುತ್ತಿಗೆ/ ಹೊರಗುತ್ತಿಗೆ ಹಾಗೂ ದಿನಗೂಲಿ ನೌಕರರ ವೇತನ ಪಾವತಿಗಾಗಿ ಅನುದಾನ ನೀಡಲಾಗುತ್ತಿದೆ. |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾಧಿಕಾರಿ ಕಛೇರಿಗಳಿಗೆ ನೀಡಲಾಗುತ್ತಿರುವ ಕಛೇರಿ ನಿರ್ವಹಣೆಗೆ ಸಾದಿಲ್ವಾರು, ಪೀಠೋಪಕರಣ, ಇಂಧನ ವೆಚ್ಚ, ಇತ್ಯಾದಿಗಳಿಗೆ ನೀಡುವ ವಾರ್ಷಿಕ ಅನುದಾನ ಎಷ್ಟು, ಸದರಿ ಅನುದಾನ ಕ್ಲಿಪ್ತ ಸಮಯದಲ್ಲಿ ಬಿಡುಗಡೆಯಾಗುವುದೆ; ಈ ಕುರಿತಂತೆ ಯಾವುದಾದರೂ ವೆಚ್ಚದ ಮೊತ್ತ ಪಾವತಿಗೆ ಬಾಕಿಯಾಗಿದೆಯೇ; ಬಾಕಿಯಿದ್ದಲ್ಲಿ ಎಷ್ಟು ದಿನದಿಂದ ಬಾಕಿಯಾಗಿದೆ; ಜಿಲ್ಲಾಧಿಕಾರಿಗಳಿಗೆ ಅಥವಾ ಕಛೇರಿ ಮುಖ್ಯಸ್ಥರಿಗೆ ಕಛೇರಿ ನಿರ್ವಹಣೆಗೆ ಎಷ್ಟು ಮೊತ್ತದ ಹಣವನ್ನು ಖರ್ಚು ಮಾಡಲು ವಿವೇಚನಾಧಿಕಾರ ಇರುತ್ತದೆ; (ಪ್ರಸ್ತುತ ಸಾಲಿನ ವಿವರ ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾಧಿಕಾರಿ ಕಛೇರಿಗಳಿಗೆ ನೀಡಲಾಗುತ್ತಿರುವ ಅನುದಾನದ ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.<br>2022-23 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಅನುದಾನವನ್ನು ಕಛೇರಿಗಳ ನಿರ್ವಹಣೆಗಾಗಿ 4 ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಈಗಾಗಲೇ 2 ಕಂತುಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಉಳಿದ 2 ಕಂತುಗಳ ಅನುದಾನವನ್ನು ಆರ್ಥಿಕ ಇಲಾಖೆಯು ಇಲಾಖಾ ಮುಖ್ಯಸ್ಥರಿಗೆ ಅಧಿಕಾರ ಪ್ರತ್ಯಾಯೋಜಿಸಿದ ನಂತರ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.<br>ಜಿಲ್ಲಾಧಿಕಾರಿಗಳಿಗೆ ಅಥವಾ ಕಛೇರಿ ಮುಖ್ಯಸ್ಥರಿಗೆ ಬಿಡುಗಡೆ ಮಾಡಲಾದ ಎಲ್ಲಾ ಅನುದಾನವನ್ನು ಪೂರ್ಣ ಖರ್ಚು ಮಾಡಲು ಅಧಿಕಾರವಿರುತ್ತದೆ. |
| ಇ) | ಉಭಯ ಜಿಲ್ಲೆಗಳ ಕಂದಾಯ ಇಲಾಖೆಯ ತಾಲ್ಲೂಕು ಕಛೇರಿಗಳಿಗೆ (ತಹಶೀಲ್ದಾರ್ ಕಛೇರಿ), ನಾಡ ಕಛೇರಿಗಳಿಗೆ (ಉಪ ತಹಶೀಲ್ದಾರ್ ಕಛೇರಿ)ಗ್ರಾಮ ಕರಣಿಕರ ಕಛೇರಿಗಳ ನಿರ್ವಹಣೆಗೆ ಸಾದಿಲ್ವಾರು, ಪೀಠೋಪಕರಣ, ಇಂಧನ ವೆಚ್ಚಕ್ಕಾಗಿ | ಉಭಯ ಜಿಲ್ಲೆಗಳ ಕಂದಾಯ ಇಲಾಖೆಯ ತಾಲ್ಲೂಕು ಕಛೇರಿಗಳಿಗೆ (ತಹಶೀಲ್ದಾರ್ ಕಛೇರಿ), ಗ್ರಾಮಕರಣಿಕರ ಕಛೇರಿಗಳ ನಿರ್ವಹಣೆಗೆ ಸಾದಿಲ್ವಾರು ಪೀಠೋಪಕರಣ, ಇಂಧನ ವೆಚ್ಚಕ್ಕಾಗಿ ಸೆಪ್ಟಂಬರ್-2022 ರ ಅಂತ್ಯದವರೆಗೆ ಅನುದಾನ |

| | | |
|---|---|---|
| | ನೀಡುವ ವಾರ್ಷಿಕ ಅನುದಾನ ಎಷ್ಟು; ಅನುದಾನ ನೀಡದಿದ್ದಲ್ಲಿ, ಹೇಗೆ ಕಛೇರಿ ನಿರ್ವಹಿಸಲಾಗುತ್ತಿದೆ? (ಪ್ರಸ್ತುತ ಸಾಲಿಗೆ ಸಂಬಂಧಿಸಿದಂತೆ ಕಛೇರಿವಾರು ವಿವರ ನೀಡುವುದು) | ಬಿಡುಗಡೆಯಾಗಿರುತ್ತದೆ. ಈ ಬಗ್ಗೆ ಅನುಬಂಧದ 4ನೇ ಪಂಕ್ತಿಯಲ್ಲಿ (ROW) ವಿವರಿಸಿರುವಂತೆ ಒದಗಿಸಲಾಗಿದೆ.<br><br>ನಾಡಕಛೇರಿಗಳಿಗೆ ಅಗತ್ಯವಿದ್ದ ನಿರ್ವಹಣಾ ವೆಚ್ಚಗಳನ್ನು ವಿವಿಧ ಪ್ರಮಾಣ ಪತ್ರಗಳಿಂದ ಸಂಗ್ರಹವಾದ ಅರ್ಜಿ ಶುಲ್ಕದ ಮೊತ್ತದಿಂದಲೇ ನಿರ್ವಹಿಸಲಾಗುತ್ತಿದ್ದು, ಪ್ರಸ್ತುತ, ಬ್ಯಾಂಕ್ ಖಾತೆ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಮಾಹಿತಿಯಂತೆ ಮೂಲ್ಕಿ ನಾಡಕಛೇರಿಗೆ ರೂ.36,449/- ಗಳು, ಸುರತ್ಕಲ್ ನಾಡಕಛೇರಿಗೆ ರೂ.11,383/- ಗಳು, ಗುರುಪುರ ನಾಡಕಛೇರಿಗೆ ರೂ.3671/- ಗಳು ಹಾಗೂ ಉಳ್ಳಾಲ (ತೊಕ್ಕಟ್ಟು ನಾಡಕಛೇರಿ) ರೂ.5077/- ಒಟ್ಟು 4 ನಾಡಕಛೇರಿಗಳಿಗೆ ವಿದ್ಯುತ್ ಬಿಲ್ ಪಾವತಿಗಾಗಿ ನಿರ್ದೇಶಾನಲಯದ ಆಯವ್ಯಯದ ಲೆಕ್ಕ ಶೀರ್ಷಿಕೆಯಡಿ ರೂ.57,580/-ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. |

**ಕಂಇ 103 ಡಬ್ಲ್ಯೂಬಿಆರ್ 2022**

(ಆರ್. ಅಶೋಕ)
ಕಂದಾಯ ಸಚಿವರು.

## ಅನುಬಂಧ

| ಕ್ರ. ಸಂ | ಕಛೇರಿ | ತ್ರೈಮಾಸಿಕ ಕಂತುಗಳು | ವೈದ್ಯಕೀಯ ವೆಚ್ಚ 021 | ದಿನಗೂಲಿ ನೌಕರರ ವೇತನ 033 | ಗುತ್ತಿಗೆ/ ಹೊರಗುತ್ತಿಗೆ 034 | ಪ್ರಯಾಣ ವೆಚ್ಚ 041 | ಸಾಮಾನ್ಯ ವೆಚ್ಚ051 | ದೂರವಾಣಿ ವೆಚ್ಚ 052 | ಕಛೇರಿ ಪೀಠೋಪಕರಣ ಮತ್ತು ಜೋಡಣೆ ಖರೀದಿ ವೆಚ್ಚ 053 | ಕಟ್ಟಡ ವೆಚ್ಚ 071 | ಸಾರಿಗೆ ವೆಚ್ಚ 195 | ನಿರ್ವಹಣಾ ವೆಚ್ಚ 200 | ಒಟ್ಟು (1ನೇ & 2ನೇ ಕಂತಿನ ಅನುದಾನ) |
|---|---|---|---|---|---|---|---|---|---|---|---|---|---|
| **ಲೆಕ್ಕಶೀರ್ಷಿಕೆ-2053-00-093-1-01(ಜಿಲ್ಲಾಧಿಕಾರಿಗಳು)** | | | | | | | | | | | | | |
| 1 | ಉಡುಪಿ ಜಿಲ್ಲೆ | 1&2ನೇ ಕಂತು | 125806 | - | 556482 | 72580 | 1940482 | 80644 | 38708 | 1048386 | 645160 | 75322 | 4583570 |
| 2 | ದಕ್ಷಿಣ ಕನ್ನಡ (ಮಂಗಳೂರು) | 1&2ನೇ ಕಂತು | 125806 | 193000 | 556482 | 72580 | 1940482 | 80644 | 38708 | 1048386 | 645160 | 75322 | 4583570 |
| **ಲೆಕ್ಕಶೀರ್ಷಿಕೆ-2053-00-094-1-01(ಉಪವಿಭಾಗಾಧಿಕಾರಿಗಳು)** | | | | | | | | | | | | | |
| 1 | ಉಡುಪಿ ಜಿಲ್ಲೆ | 1&2ನೇ ಕಂತು | 36800 | - | 200000 | 14716 | 245280 | 12260 | 930 | 98100 | 188680 | 23580 | 820346 |
| 2 | ದಕ್ಷಿಣ ಕನ್ನಡ (ಮಂಗಳೂರು) | 1&2ನೇ ಕಂತು | 74000 | - | 400000 | 29432 | 490560 | 24520 | - | 196200 | 377360 | 47160 | 1639762 |
| **ಲೆಕ್ಕಶೀರ್ಷಿಕೆ-2053-00-094-7-01(ತಹಶೀಲ್ದಾರ್)** | | | | | | | | | | | | | |
| 1 | ಉಡುಪಿ ಜಿಲ್ಲೆ | 1&2ನೇ ಕಂತು | 589820 | 400000 | 1224300 | 60340 | 1206870 | 67900 | 75390 | 754320 | 1439200 | 15050 | 5908580 |
| 2 | ದಕ್ಷಿಣ ಕನ್ನಡ (ಮಂಗಳೂರು) | 1&2ನೇ ಕಂತು | 675760 | 400000 | 1399200 | 68960 | 1379280 | 77600 | 87360 | 862080 | 1644800 | 17200 | 6612240 |
| **ಲೆಕ್ಕಶೀರ್ಷಿಕೆ-2029-00-101-1-01(ಗ್ರಾಮ ಸಿಬ್ಬಂದಿ)** | | | | | | | | | | | | | |
| 1 | ಉಡುಪಿ ಜಿಲ್ಲೆ | 1&2ನೇ ಕಂತು | 894600 | - | 17432400 | 15120 | 151200 | 7560 | 1540 | 75460 | - | - | 18577880 |
| 2 | ದಕ್ಷಿಣ ಕನ್ನಡ (ಮಂಗಳೂರು | 1&2ನೇ ಕಂತು | 1022400 | - | 26948400 | 17280 | 172800 | 8640 | 1760 | 86240 | - | - | 28257520 |